## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರಳ ಸಾಮೂಹಿಕ ವಿವಾಹವನ್ನು ಜನಪ್ರಿಯಗೊಳಿಸಲು "ಆದರ್ಶ ವಿವಾಹ ಯೋಜನೆಯ" ಅನುಷ್ಠಾನಕ್ಕಾಗಿ ಪ್ರಾದೇಶಿಕ ಆಯುಕ್ತರುಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 81 ಎಂಎಸ್‌ಟಿ 07, ದಿನಾಂಕ:02/05/2008.
2) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 5 ಎಡಿಎಂ 2008, ದಿನಾಂಕ:19/09/2008
3) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 1 ಎಡಿಎಂ 2009, ದಿನಾಂಕ:29/04/2009.
4) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 1 ಎಡಿಎಂ 2009, ದಿನಾಂಕ:11/08/2009.

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸರಳ ಸಾಮೂಹಿಕ ವಿವಾಹವನ್ನು ಜನಪ್ರಿಯಗೊಳಿಸಲು ಆದರ್ಶ ವಿವಾಹ ಯೋಜನೆಯನ್ನು ಮೇಲೆ ಓದಲಾದ ಉಲ್ಲೇಖ 1 ರನ್ವಯ ರಾಜ್ಯದಲ್ಲಿ ಜಾರಿಗೆ ತಂದಿದ್ದು, ನಗರ ಪ್ರದೇಶಗಳಲ್ಲಿ ಕನಿಷ್ಟ 25 ಜೋಡಿಗಳು ಹಾಗೂ ಉಲ್ಲೇಖ 2 ರನ್ವಯ ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಟ 10 ಜೋಡಿಗಳ ವಿವಾಹಗಳು ನಡೆದಿರುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಿವಾಹವಾದವರು ಮಾತ್ರ ಈ ಯೋಜನೆಯ ಅನುಕೂಲ ಪಡೆಯಲು ಅರ್ಹತೆ ಹೊಂದಿರುತ್ತಾರೆ. ಈ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು 2009-10 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2250-00-800-2-17-059 (ಯೋಜನೆ) ರಲ್ಲಿ ರೂ. 1000 ಲಕ್ಷಗಳನ್ನು ಒದಗಿಸಲಾಗಿದೆ. ಈ ಪೈಕಿ ಮೊದಲ ಹಾಗೂ ಎರಡನೇ ಹಂತವಾಗಿ ಉಲ್ಲೇಖ 3 ಮತ್ತು 4 ರನ್ವಯ ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ ತಲಾ 50.00 ಲಕ್ಷಗಳಂತೆ ರೂ.400 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು. ಜಿಲ್ಲಾಧಿಕಾರಿಗಳು, ಗದಗ ಜಿಲ್ಲೆ ಇವರು ಗದಗ ಜಿಲ್ಲೆಯಲ್ಲಿ ಸುಮಾರು 2000 ಬಡ ಕುಟುಂಬದ ವಧು ವರರಿಗೆ ಸಾಮೂಹಿಕ ವಿವಾಹ ಮಾಡುವ ಕಾರ್ಯ ಕ್ರಮ ಇರುವ ಪ್ರಯುಕ್ತ ಆದರ್ಶ ವಿವಾಹ ಯೋಜನೆಯಡಿ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ನೀಡಲು ರೂ.200.00 ಲಕ್ಷಗಳ ಅನುದಾನ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಕಾರ್ಯ ಕ್ರಮದಲ್ಲಿ ಎಷ್ಟು ಮದುವೆಗಳು ಆಗುತ್ತವೆ ಎಂಬುದರ ಬಗ್ಗೆ ಮಾಹಿತಿ ಬಂದ ನಂತರ 100.00 ಲಕ್ಷಗಳನ್ನು ಬಿಡುಗಡೆ ಮಾಡಲಾಗುವುದು. ಪ್ರಸ್ತುತ ರೂ.100.00 ಲಕ್ಷಗಳನ್ನು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರಿಗೆ ಅನುದಾನ ಬಿಡುಗಡೆ ಮಾಡಿ ಅವರ ವ್ಯಾಪ್ತಿಯಲ್ಲಿ ಬರುವ ಗದಗ ಜಿಲ್ಲಾಧಿಕಾರಿಗಳಿಗೆ ಮರು ಹಂಚಿಕೆ ಮಾಡಲು ಆದೇಶಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 1 ಎಡಿಎಂ 2009, ಬೆಂಗಳೂರು. ದಿನಾಂಕ:05/10/2009.**

ಆದರ್ಶ ವಿವಾಹ ಯೋಜನೆಯಡಿ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ನೀಡಲು ಹೆಚ್ಚುವರಿ ಅನುದಾನವನ್ನು ರೂ.100.00 ಲಕ್ಷಗಳನ್ನು (ನೂರು ಲಕ್ಷಗಳು ಮಾತ್ರ) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರಿಗೆ ಬಿಡುಗಡೆ ಮಾಡಲಾಗಿದೆ. ಅನುದಾನವನ್ನು ತಮ್ಮ ವ್ಯಾಪ್ತಿಯ ಗದಗ ಜಿಲ್ಲಾಧಿಕಾರಿಗಳಿಗೆ ಬೇಡಿಕೆಯನ್ನು ಅನುಸರಿಸಿ ಅಗತ್ಯ ಅನುದಾನವನ್ನು ಮರು ಹಂಚಿಕೆ ಮಾಡಲು ಆದೇಶಿಸಿದೆ. ಈ ಯೋಜನೆಗೆ ತಗುಲುವ ವೆಚ್ಚವನ್ನು 2009-10 ನೇ ಆರ್ಥಿಕ ಸಾಲಿನ ಲೆಕ್ಕ ಶೀರ್ಷಿಕೆ